2 ನೇ ಅಪರ ಸಿವಿಲ್ ಜಡ್ಜ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಯವರ ನ್ಯಾಯಾಲಯ ಪಾಂಡವಪುರ

ಸಿ.ಸಿ.ಸಂಖ್ಯೆಃ **307/2022**

ಸುಕನ್ಯ ಕೋಂ ಸಿ ಡಿ ವೆಂಕಟೇಶ್ , 49 ವರ್ಷ, ವಾಸಃ ಕೃಷ್ಣನಗರ, 3 ನೇ ಹಂತ, ಐ ಬಿ ಹಿಂಭಾಗ, ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ.

- ಪಿರ್ಯಾದಿದಾರರು

- ವಿರುದ್ಧ -

ರವಿಕುಮಾರ್ ಕೆ ಎಂ ಬಿನ್ ಮಹದೇವಪ್ಪ ಕೇರ್ ಆಫ್ ಲೋಕೇಶ, 34 ವರ್ಷ, ವಾಸಃ ನಂ.37, 3 ನೇ ಮಹಡಿ, 11 ನೇ ಕ್ರಾಸ್, 1 ನೇ ಮೇನ್, ಬಿ ಎಂ ಶ್ರೀ ನಗರ, ಮೇಟಗಳ್ಳಿ ಪೋಸ್ಟ್, ಮೈಸೂರು ನಗರ.

- ಆರೋಪಿತ

ದಂಡ ಪ್ರಕ್ರಿಯೆ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿಯನ್ನು ವಿಚಾರಿಸಿ ಬರೆದುಕೊಂಡ ಹೇಳಿಕೆ

ಪ್ರಶ್ನೆ **-1 :-** ನೀವು ನ್ಯಾಯಾಲಯದಲ್ಲಿ ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆ ಕೇಳಿದ್ದಿರಲ್ಲವೇ?

ಉತ್ತರಃ

ಪ್ರಶ್ನೆ **-2 :-** ಪ್ರಾ.ಸಾ -1 ರವರಾದ ಸುಕನ್ಯ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಂದ ನಗದು 6,00,000/- ರೂ.ಗಳ ಹಣವನ್ನು ತನ್ನ ದರದು ನಿಮಿತ್ತ ಅಂದರೆ ಕೈಸಾಲ ತೀರಿಸುವ ಸಲುವಾಗಿ ಮತ್ತು ಗೃಹ ಕೃತ್ಯದ ಖರ್ಚಿಗಾಗಿ 2021 ರ ಆಗಸ್ಟ್ ತಿಂಗಳ 3 ನೇ ವಾರದಲ್ಲಿ ಮೂರು ತಿಂಗಳ ಒಳಗಾಗಿ ಹಿಂದಿರುಗಿಸುತ್ತೇನೆಂದು ಪಡೆದಿದ್ದು, 3 ತಿಂಗಳು ಕಳೆದ ನಂತರ ಪಿರ್ಯಾದುದಾರರು ಸಾಲದ ಹಣವನ್ನು ವಾಪಸ್ಸು ಕೇಳಲಾಗಿ, ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮೈಸೂರು, ವಿಜಯನಗರ 2 ನೇ ಹಂತದ ಶಾಖೆಯ 26.11.2021 ರ ದಿನಾಂಕವುಳ್ಳ ಚೆಕ್ ನಂ.224161 ನ್ನು ಇಲ್ಲಿಂದ ಸಾಲದ ಹಣವನ್ನು ತೀರುವಳಿ ಮಾಡಿಕೊಳ್ಳುವಂತೆ ಹೇಳಿ ಕೊಟ್ಟಿರುತ್ತೀರಿ ಹಾಗೂ ಸದರಿ ಚೆಕ್ಕನ್ನು ಫಿರ್ಯಾದುದಾರರು ತಾವು ಖಾತೆ ಹೊಂದಿರುವ

ಎಂ ಡಿ ಸಿ ಸಿ ಬ್ಯಾಂಕ್, ಪಾಂಡವಪುರ ನೈಟ್ ಶಾಖೆಗೆ ನಗಧೀಕರಣಕ್ಕಾಗಿ ದಿನಾಂಕ 07.12.2021 ರಂದು ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ 'funds insufficient' ಎಂಬ ಹಿಂಬರಹವನ್ನು ದಿನಾಂಕ 15.12.2021 ರಂದು ವಾಪಸ್ ನೀಡಿರುತ್ತಾರೆ. ಆದ್ದರಿಂದ ನಾನು ವಕೀಲರ ಮೂಲಕ ದಿನಾಂಕ 04.01.2022 ರಂದು ನೋಟೀಸ್‌ನ್ನು ಅಂಚೆ ನೋಂದಣಿ ಮೂಲಕ ನೀಡಿದ್ದು, ಸದರಿ ನೋಟೀಸನ್ನು ತಾವು ದಿನಾಂಕ 15.01.2022 ರಂದು ತಿರಸ್ಕರಿಸಿರುತ್ತೀರಿ ಮತ್ತು ಅನಂತರವೂ ಸಹ ಆರೋಪಿ ನೀವು ತನಗೆ ಕೊಡಬೇಕಾದ ಚೆಕ್ಕ ಮೊತ್ತವನ್ನು ಮರುಪಾವತಿ ಮಾಡದೆ ವಂಚನೆ ಮಾಡಿರುತ್ತೀರಿ ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ -3 :- ಹೆಚ್ಚಿ ಗೆ ಏನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಶ್ನೆ -4 :- ನಿಮ್ಮ ಪರ ಸಾಕ್ಷ್ಯ ಇದೆಯೇ?

ಉತ್ತರಃ

ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಮಾಡಿಕೊಂಡಿದ್ದು ಅದು ಸರಿಯಾಗಿಯೂ ಮತ್ತು ಸಂಪೂರ್ಣವಾಗಿಯೂ ಇದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಪಾಂಡವಪುರ.

ದಿನಾಂಕಃ 05.08.2024
ಸ್ಥಳಃ ಪಾಂಡವಪುರ